# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 324**

**ಮಾನ್ಯ ಸದಸ್ಯರ ಹೆಸರು : ಡಾ|| ಎಂ.ಜಿ.ಮುಳೆ**

**ಉತ್ತರಿಸುವ ದಿನಾಂಕ : 06.03.2025**

**ಉತ್ತರಿಸುವ ಸಚಿವರು : ಗೃಹ ಸಚಿವರು**

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;</td><td>ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಸೈಬರ್ ಅಪರಾಧಗಳ ಕುರಿತಂತೆ ಐಟಿ ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಮತ್ತು ಪತ್ತೆ ಹಚ್ಚಲಾಗಿರುವ ಸೈಬರ್ ಅಪರಾಧ ಪ್ರಕರಣಗಳ ಅಂಕಿ-ಅಂಶಗಳು ಈ ಕೆಳಕಂಡಂತಿದೆ:<br><br>ಐಟಿ ಕಾಯ್ದೆ (ಸೈಬರ್ ಅಪರಾಧಗಳು)<br><br>
<table>
<tr><th>ವರ್ಷ</th><th>ವರದಿ</th><th>ಪತ್ತೆ</th><th>ತನಿಖೆ</th></tr>
<tr><td>2023</td><td>22224</td><td>5541</td><td>16683</td></tr>
<tr><td>2024</td><td>22415</td><td>1841</td><td>20574</td></tr>
</table></td></tr>
<tr><td>ಆ</td><td>ಸೈಬರ್ ಅಪರಾಧಗಳ ಬಗ್ಗೆ ತನಿಖೆ ಮಾಡಲು ಎಷ್ಟು ಪೊಲೀಸ್ ಠಾಣೆಗಳಿವೆ; ಎಷ್ಟು ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಾರೆ; ಸಿಬ್ಬಂದಿಗಳ ಕೊರತೆಯಿಂದ ತನಿಖೆಗೆ ಅಡಚಣೆಯಾಗಿದೆಯೇ;</td><td>ರಾಜ್ಯದಲ್ಲಿ ಸೈಬರ್ ಅಪರಾಧಗಳನ್ನು ದಾಖಲಿಸಿಕೊಂಡು, ತನಿಖೆ ಮಾಡಲು ರಾಜ್ಯದಲ್ಲಿ ಒಟ್ಟು 43 ಸೈಬರ್ ಎಕಾನಾಮಿಕ್ ಮತ್ತು ನಾರ್ಕೋಟಿಕ್ (CEN) ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ರಾಜ್ಯದ ಇತರೆ ಎಲ್ಲಾ ಪೊಲೀಸ್ ಠಾಣೆಗಳಲ್ಲಿಯೂ ಮತ್ತು ಸಿಐಡಿ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿಯೂ ಸಹ ಸೈಬರ್ ಅಪರಾಧ ಪ್ರಕರಣಗಳನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗುತ್ತಿದೆ.<br><br>ರಾಜ್ಯದಲ್ಲಿನ ಸೈಬರ್ ಪೊಲೀಸ್ ಠಾಣೆಗಳಿಗೆ ಎಸ್.ಪಿ. ದರ್ಜೆಯ ಅಧಿಕಾರಿಯಿಂದ ಕಾನ್‌ಸ್ಟೇಬಲ್ ಹಂತದ ವರೆಗೆ ಒಟ್ಟು 1142 ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ.<br><br>ಸೈಬರ್ ಅಪರಾಧ ಪ್ರಕರಣಗಳ ತನಿಖೆಗೆ ಯಾವುದೇ ಅಡಚಣೆಯಾಗಿರುವುದಿಲ್ಲ.</td></tr>
</table>

<table>
<tr>
<td>ಇ</td>
<td>ಸೈಬರ್ ಅಪರಾಧಗಳ ತನಿಖೆಗೆ ವಿಶೇಷ ತಾಂತ್ರಿಕ ಪರಿಣಿತರನ್ನು ನೇಮಕ ಮಾಡಲಾಗಿದೆ: ಸಿಬ್ಬಂದಿಗಳಿಗೆ ವಿಶೇಷ ತರಬೇತಿ ನೀಡಲು ಕೈಗೊಂಡ ಕ್ರಮಗಳೇನು;</td>
<td>
ಸೈಬರ್ ಅಪರಾಧಗಳ ತನಿಖೆಗೆ ವಿಶೇಷ ತಾಂತ್ರಿಕ ಪರಿಣಿತರ ನೇಮಕ ಮತ್ತು ಸಿಬ್ಬಂದಿಗಳಿಗೆ ವಿಶೇಷ ತರಬೇತಿ ನೀಡಲು ಕೈಗೊಂಡಿರುವ ಕ್ರಮಗಳ ವಿವರಗಳು ಈ ಕೆಳಕಂಡಂತಿವೆ:<br><br>
<u>ಸಿಐಡಿ ವಿಭಾಗ</u>
<ul>
<li>ಸೈಬರ್ ಅಪರಾಧಗಳ ತನಿಖೆಯಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲು ಸಿಐಡಿ ಘಟಕದ ಸಿಸಿಡಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿ.ಎಫ್.ಯು ಘಟಕದಲ್ಲಿ ಇಬ್ಬರು ನುರಿತ ತಾಂತ್ರಿಕ ತಜ್ಞರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.</li>
<li>ಸದರಿ ರವರುಗಳು ಸಿಸಿಡಿ ವಿಭಾಗದ ಸೈಬರ್ ಅಪರಾಧ ಪ್ರಕರಣಗಳಲ್ಲಿ ಹಾಗೂ ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ಜಪ್ತಿಪಡಿಸಲಾದ ಡಿಜಿಟಲ್ ಉಪಕರಣಗಳನ್ನು ತಾಂತ್ರಿಕ ವಿಶ್ಲೇಷಣೆ ಕೈಗೊಂಡು ತಾಂತ್ರಿಕ ಸಹಾಯವನ್ನು ಒದಗಿಸುತ್ತಿರುತ್ತಾರೆ.</li>
<li>ಸಿಐಡಿಯ ಕಛೇರಿಯ Centre for Cybercrime Investigation Training & Research (CCITR) ವಿಭಾಗದಲ್ಲಿ 2019ನೇ ಸಾಲಿನಿಂದ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳನ್ನು ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ಹಲವಾರು ತರಬೇತಿಗಳನ್ನು ನೀಡಲಾಗುತ್ತಿರುತ್ತದೆ.</li>
<li>ಹ್ಯಾಕಿಂಗ್ ಹಾಗೂ ಇತರೆ ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲು Drone Forensics, RAID Forensics, Wearable device forensics, Cloud forensics, Crypto currency tracing and investigation ನಂತಹ ಸುಧಾರಿತ ತರಬೇತಿಗಳನ್ನು ಹಾಗೂ ಆಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಅಧಿಕಾರಿ/ಸಿಬ್ಬಂದಿಗಳಿಗೆ ವಿಶೇಷ ತರಬೇತಿಗಳನ್ನು ಸಹ ನೀಡಲಾಗುತ್ತಿರುತ್ತದೆ.</li>
</ul>
2024ನೇ ಸಾಲಿನಿಂದ ಈವರೆಗೆ ಆಯೋಜಿಸಿರುವ ತರಬೇತಿಯ ವಿವರಗಳು:<br><br>
<table>
<tr><th>ಸೈಬರ್ ಅಪರಾಧ ತರಬೇತಿ</th><th>ತರಬೇತಿ ಪಡೆದವರ ಸಂಖ್ಯೆ</th></tr>
<tr><td>ಕರ್ನಾಟಕ ರಾಜ್ಯ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧ ಬಗ್ಗೆ ಲೆವಲ್-1, ಲೆವಲ್-2 ಹಾಗೂ ಆಧುನಿಕ ಸುಧಾರಿತ ತರಬೇತಿ</td><td>1938</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr><td>ಕರ್ನಾಟಕ ರಾಜ್ಯ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧ ಬಗ್ಗೆ ಆನ್‌ಲೈನ್ ತರಬೇತಿ</td><td>7457</td></tr>
<tr><td>ಒಟ್ಟು</td><td>9395</td></tr>
</table>
<u>ಬೆಂಗಳೂರು ನಗರ:</u>
08 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ ಹಾಗೂ 08 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಒಟ್ಟು 16 ಸೈಬರ್ ತಾಂತ್ರಿಕತಜ್ಞರನ್ನು ಹೊರಗುತ್ತಿಗೆ ಆಧಾರದ ಮೇರೆಗೆ ನಿಯೋಜಿಸಲು ಆದೇಶ ನೀಡಲಾಗಿರುತ್ತದೆ.
ಅದರಲ್ಲಿ 06 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಹುದ್ದೆಗೆ 02 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ ಹುದ್ದೆಗೆ ಒಟ್ಟು 08 ತಾಂತ್ರಿಕ ತಜ್ಞರನ್ನು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಘಟಕಕ್ಕೆ ನೇಮಕ ಮಾಡಲಾಗಿರುತ್ತದೆ.
</td>
</tr>
<tr>
<td>ಈ</td>
<td>ಕಳೆದ ಎರಡು ವರ್ಷಗಳಲ್ಲಿ ವಿಶೇಷವಾಗಿ ಬ್ಯಾಂಕ್ ಖಾತೆಗಳಿಂದ ಗ್ರಾಹಕರ ಹಣ ಅಪಹರಿಸಿರುವ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿ ಹಣ ಕಳೆದುಕೊಂಡವರಿಗೆ ಹಣ ಮರಳಿಸಲಾಗಿದೆ? (ವಿವರ ನೀಡುವುದು)</td>
<td>
2023 ಮತ್ತು 2024ನೇ ಸಾಲಿನಲ್ಲಿ ವಿಶೇಷವಾಗಿ ಬ್ಯಾಂಕ್ ಖಾತೆಗಳಿಂದ ಗ್ರಾಹಕರ ಹಣ ಅಪಹರಿಸಿರುವ ಪ್ರಕರಣಗಳ ಸಂಖ್ಯೆ ಮತ್ತು ಅವುಗಳಲ್ಲಿ ಪತ್ತೆ ಹಚ್ಚಿ ಹಣ ಕಳೆದುಕೊಂಡವರಿಗೆ ಹಣ ಮರಳಿಸಲಾಗಿರುವ ವಿವರಗಳನ್ನು ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಬ್ಯಾಂಕ್ ಖಾತೆಯಿಂದ ಗ್ರಾಹಕರ ಹಣ ಅಪಹರಿಸಿರುವ ಪ್ರಕರಣಗಳ ಸಂಖ್ಯೆ</th><th>ಬ್ಯಾಂಕ್ ಖಾತೆಯಿಂದ ಗ್ರಾಹಕರ ಹಣ ಅಪಹರಿಸಿರುವ ಪ್ರಕರಣಗಳಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ</th><th>ಬ್ಯಾಂಕ್ ಖಾತೆಯಿಂದ ಗ್ರಾಹಕರ ಹಣ ಅಪಹರಿಸಿರುವ ಪ್ರಕರಣಗಳಲ್ಲಿ ಗ್ರಾಹಕರಿಗೆ ಹಣ ಮರಳಿಸಿರುವ ವಿವರ</th></tr>
<tr><td>2023</td><td>19466</td><td>2810</td><td>1142371790</td></tr>
<tr><td>2024</td><td>20092</td><td>1248</td><td>2017071720</td></tr>
</table>
</td>
</tr>
</table>

ಸಂಖ್ಯೆ: ಹೆಚ್‌ಡಿ 08 ಪಿಸಿಕ್ಯೂ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು